ಕರ್ನಾಟಕ ಸರ್ಕಾರ

ಪೊಲೀಸ್ ಇಲಾಖೆ

ಸಂಖ್ಯೆ:95/ನೇಮಕಾತಿ-2/2020-21

ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್,
ನೇಮಕಾತಿ ರವರ ಕಛೇರಿ
ಕಾರ್ಲಟನ್ ಭವನ, ಅರಮನೆ ರಸ್ತೆ,
ಬೆಂಗಳೂರು, ದಿನಾಂಕ: 27.07.2021

ವಿಷಯ: ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ವೈರ್‌ಲೆಸ್) (ಪುರುಷ & ಮಹಿಳಾ) ಹಾಗೂ ಸೇವಾನಿರತ ಹುದ್ದೆಗಳ ನೇಮಕಾತಿ ಕುರಿತು.

ಉಲ್ಲೇಖ: 1] ಅಧಿಸೂಚನೆ ಸಂಖ್ಯೆ:95/ನೇಮಕಾತಿ-2/2020-21, ದಿನಾಂಕ: 07.05.2020,
2] ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆ ದಿನಾಂಕ: 30.04.2021.

## ತಾತ್ಕಾಲಿಕ ಆಯ್ಕೆ ಪಟ್ಟಿ

1. ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ವೈರ್‌ಲೆಸ್) (ಪುರುಷ & ಮಹಿಳಾ) ಹಾಗೂ ಸೇವಾನಿರತ 26 ಹುದ್ದೆಗಳ ನೇಮಕಾತಿಯನ್ನು ಉಲ್ಲೇಖಿತ-1ರ ಅಧಿಸೂಚನೆಯನ್ವಯ ಕೈಗೊಳ್ಳಲಾಗಿರುತ್ತದೆ. ಸದರಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಪರಿಷ್ಕೃತ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ ನಂತರ ಸದರಿ ಆಯ್ಕೆ ಪಟ್ಟಿಯಿಂದ ಕೆಲವು ಅಭ್ಯರ್ಥಿಗಳನ್ನು ತೆಗೆದು ಹಾಕಿದ ಕಾರಣದಿಂದ ಉಂಟಾದ ರಿಕ್ತಸ್ಥಾನಗಳಿಗೆ ಹೊಸ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಉಲ್ಲೇಖಿತ-2ರನ್ವಯ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

2. ಉಲ್ಲೇಖಿತ-2ರ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳಲ್ಲಿ ಶ್ರೀ ಮಂಜುನಾಥ ಕೆ.ಎಂ. ಮತ್ತು ಶ್ರೀ ಗೋವಿಂದ್ ಶಿವಪ್ಪ ಕರಬಾರಿ, ರವರುಗಳು ನಿಯಮಾನುಸಾರ ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಹೊಂದಿರುವುದಿಲ್ಲವೆಂದು ಡಿಐಜಿಪಿ, ವೈರ್‌ಲೆಸ್ ರವರು ತಿಳಿಸಿರುವ ಕಾರಣ ಸದರಿ 02 ಅಭ್ಯರ್ಥಿಗಳ ಆಯ್ಕೆ ಮತ್ತು ಅಭ್ಯರ್ಥಿತನವನ್ನು ಆದೇಶ ಸಂಖ್ಯೆ: 95/ನೇಮಕಾತಿ-2/2020-21, ದಿನಾಂಕ: 27.07.2021 ರನ್ವಯ ರದ್ದುಗೊಳಿಸಲಾಗಿರುತ್ತದೆ.

3. ಮೇಲ್ಕಂಡಂತೆ, 02 ಅಭ್ಯರ್ಥಿಗಳ ಅಭ್ಯರ್ಥಿತನವನ್ನು ರದ್ದುಪಡಿಸಿದ ಕಾರಣದಿಂದ ಉಂಟಾದ ರಿಕ್ತ ಸ್ಥಾನಗಳಿಗೆ ಮೆರಿಟ್ ಹಾಗೂ ಮೀಸಲಾತಿಯನುಸಾರ ಅರ್ಹರಿರುವ ಅಭ್ಯರ್ಥಿಗಳನ್ನು ಆಯ್ಕೆಮಾಡಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕೆಳಕಂಡಂತೆ ಪ್ರಕಟಿಸಲಾಗಿರುತ್ತದೆ.

ಎ) ಈ ಆಯ್ಕೆ ಪಟ್ಟಿಯು ನಿಯಮಗಳನುಸಾರ ರಚಿಸಲಾಗಿರುವ ವೈದ್ಯಕೀಯ ಮಂಡಳಿಯು ನಡೆಸುವ ವೈದ್ಯಕೀಯ ಪರೀಕ್ಷೆಯ ಫಲಿತಾಂಶಗಳಿಗೆ ಒಳಪಟ್ಟಿರುತ್ತದೆ.

ಬಿ) ಆಯ್ಕೆ ಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರು ಇದ್ದ ಕಾರಣದಿಂದ ಸದರಿಯವರಿಗೆ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ, ಯಾವುದೇ ರೀತಿಯ ಕಾನೂನಾತ್ಮಕ ಹಕ್ಕು ಇರುವುದಿಲ್ಲ. ಸದರಿ ನೇಮಕಾತಿಯು ಮೇಲ್ಕಂಡಂತೆ ಹೇಳಲಾದ ಷರತ್ತುಗಳಿಗೆ ಒಳಪಟ್ಟಿರುತ್ತದೆ.

ಸಿ) ಈ ಆಯ್ಕೆ ಪಟ್ಟಿಯು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ / ಮಾನ್ಯ ಉಚ್ಚ ನ್ಯಾಯಾಲಯ / ಮಾನ್ಯ ಭಾರತದ ಸರ್ವೋಚ್ಚ ನ್ಯಾಯಾಲಯದ ಅಂತಿಮ ತೀರ್ಮಾನಗಳಿಗೆ ಒಳಪಟ್ಟಿರುತ್ತದೆ.

..2...

| PROVISIONAL SELECT LIST FOR THE POST OF POLICE SUB-INSPECTOR (WIRELESS) (MEN) (MERITWISE) | | | | | | | |
|---|---|---|---|---|---|---|---|
| SL. NO. | APPN. NO. | ROLL NO. | NAME | MARKS SECURED | | TOTAL | SELECTED CATEGORY |
| | | | | P1 | P2 | | |
| 1 | 2801959 | 3508238 | PRATAP | 34.5 | 67.5 | 102 | SC _EXS |
| 2 | 2805447 | 3507921 | DAYANANDA U | 37.5 | 64.125 | 101.625 | 2A_EXS |

ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್,
ನೇಮಕಾತಿ ಮತ್ತು ಅಧ್ಯಕ್ಷರು,
ಪಿಎಸ್ಐ (ವೈರ್‌ಲೆಸ್) ನೇಮಕಾತಿ ಸಮಿತಿ,
ಕಾರ್ಲಟನ್ ಭವನ, ಅರಮನೆ ರಸ್ತೆ,
ಬೆಂಗಳೂರು.

**ಪ್ರತಿಯನ್ನು:** ಕಛೇರಿ ಕಡತ ಮತ್ತು ಸೂಚನಾ ಫಲಕ.

**ಪ್ರತಿಯನ್ನು ಅಭಿನಂದನೆಗಳೊಂದಿಗೆ:**
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು.